॥ ಓಂ ಗಂ ಗಣಪತಯೇ ನಮಃ ॥

**ಸಂತ ಸದ್ಗುರು ಶ್ರೀ ಭದ್ರಗಿರಿ ಕೇಶವದಾಸ ವಿರಚಿತ**

# ಕೀರ್ತನರೂಪೀ ಭಗವದ್ಗೀತೆ

(ಮೂಲ–ತಾತ್ಪರ್ಯ–ಕೀರ್ತನೆಗಳು)

**ಸಂಪಾದಕರು:**

**ಬಿ.ಕೆ. ನಾಗೇಂದ್ರ**
**ಮೇರಿಲ್ಯಾಂಡ್, ಯು.ಎಸ್.ಎ.**

ಪ್ರಕಾಶಕರು:

**ವಿಶ್ವಶಾಂತಿ ಆಶ್ರಮ ಬುಕ್ ಟ್ರಸ್ಟ್**
ವಿಶ್ವಶಾಂತಿ ಆಶ್ರಮ
ಅರಸಿನಕುಂಟೆ, ನೆಲಮಂಗಲ ತಾಲ್ಲೂಕು,
ಬೆಂಗಳೂರು ೫೬೨ ೧೨೩

# ಕೀರ್ತನರೂಪೀ ಭಗವದ್ಗೀತೆ

## ಪರಿವಿಡಿ


೧. ಶ್ರೀ ಸಂತ ಭದ್ರಗಿರಿ ಕೇಶವದಾಸರಿಂದ ಪೀಠಿಕೆ ... ಪುಟ: ೪

೨. ಪ್ರಸ್ತಾವನೆ (ಪ್ರೊ. ಜಿ. ಅಶ್ವತ್ಥನಾರಾಯಣ) ... ಪುಟ: ೬

೩. ಶ್ರೀ ಕೇಶವದಾಸರ ಸಂಕ್ಷಿಪ್ತ ಪರಿಚಯ ... ಪುಟ: ೧೩

೪. ಸಂಪಾದಕರ ನುಡಿ ... ಪುಟ: ೧೫

೫. ಪ್ರಕಾಶಕರ ಮಾತು ... ಪುಟ: ೧೭

೬. ಸಮರ್ಪಣೆ ... ಪುಟ: ೧೮

೭. 'ಶ್ರೀ ಭಗವದ್ಗೀತಾ ದರ್ಶನಮಂದಿರ' ಭಾವಚಿತ್ರಗಳು ... ಪುಟ: ೧೯

೮. ಕೀರ್ತನೆಗಳ ಅನುಕ್ರಮಣಿಕೆ ... ಪುಟ: ೨೩

೯. ಧ್ಯಾನಶ್ಲೋಕಗಳು ... ಪುಟ: ೩೪

೧೦. ಕೀರ್ತನರೂಪೀ ಭಗವದ್ಗೀತೆ (ಮೂಲಶ್ಲೋಕ, ತಾತ್ಪರ್ಯ ಮತ್ತು ಕೀರ್ತನೆ) ... ಪುಟ: ೩೬

ಅನುಬಂಧ ೧: ಭಗವದ್ಗೀತಾ ಸಂಸ್ಕೃತ ಭಜನೆಗಳು ... ಪುಟ: ೨೪೮

ಅನುಬಂಧ ೨: ಭಗವದ್ಗೀತೆ ಮಹಿಮೆ ಕೀರ್ತನೆಗಳು ... ಪುಟ: ೨೫೭

ಅನುಬಂಧ ೩: ಭಗವದ್ಗೀತಾ ದರ್ಶನಮಂದಿರಪರ ಕೀರ್ತನೆಗಳು ... ಪುಟ: –

ಅನುಬಂಧ ೪: ಗೀತೆಯ ವಿವಿಧ ವಿಷಯಗಳ ಕೃತಿಗಳು ... ಪುಟ: ೨೬೮

ಅನುಬಂಧ ೫: ಗೀತಾಚಾರ್ಯ ಶ್ರೀ ಕೃಷ್ಣ ಸ್ತುತಿಗಳು ... ಪುಟ: ೨೭೭

ಅನುಬಂಧ ೬: ಶ್ರೀ ಕೃಷ್ಣ ಆರತಿ ಕೃತಿಗಳು ... ಪುಟ: ೨೮೮

೧೧. ಶ್ರೀ ಕೇಶವದಾಸರಿಗೆ ಪ್ರಿಯವಾದ ಗೀತೆಯ ಪದಸಮುಚ್ಚಯಗಳು ... ಪುಟ: ೨೯೦

೧೨. 'ಭಗವದ್ಗೀತಾ ಮತ್ತು ಬೈಬಲ್ ಸಾರ' ಗ್ರಂಥದಿಂದ ಮೂರು ಲೇಖನಗಳು ... ಪುಟ: ೨೯೪

೧೩. ನಾಟಕ: 'ಭಗವದ್ಗೀತಾ – ವಿಷ್ವರೂಪದರ್ಶನ; ... ಪುಟ: ೨೯೯

೧೪. ಭಗವದ್ಗೀತಾ 'ಅಂತ್ಯಾಕ್ಷರಿ' ಸ್ಪರ್ಧೆ ವಿಷಯಗಳು, ಏರ್ಪಡಿಸುವ ವಿಧಾನ ... ಪುಟ: ೩೦೯

೧೫. ವಿಶ್ವಶಾಂತಿ ಆಶ್ರಮದ ಪ್ರಕಟಣೆಗಳು ... ಪುಟ: –

೧೬. ಉಪಯೋಗಿಸಿರುವ ಸಂಕ್ಷೇಪ ಶಬ್ದಗಳು (ಅಬ್ರೀವಿಯೇಷನ್ಸ್) ... ಪುಟ: –

೧೭. ಅಕಾರಾದಿ ಕೀರ್ತನೆಗಳ ಸೂಚಿ ... ಪುಟ: –


*******

## ಪೀಠಿಕೆ

ಅಪಾರಮಹಿಮ ಶ್ರೀಕೃಷ್ಣನಿಂದ ಉಪದಿಷ್ಟವಾದ ಉಪನಿಷತ್ತು ಗೀತೆ. 'ಗೀತೆ' ಎಂದೊಡನೆಯೇ ಭಗವದ್ಗೀತೆ ಎಂಬುದನ್ನು ಅರಿಯದವರಿಲ್ಲ. ಭಗವದ್ಗೀತೆಗೆ ಸಮನಾದ ಧರ್ಮಗ್ರಂಥವಿಲ್ಲ. ಅದು ಎಲ್ಲ ಉಪನಿಷತ್ತುಗಳ ಸಾರ. ಒಂದು ನೋಟದಲ್ಲಿ ಭಗವದ್ಗೀತೆಯೇ ನಮ್ಮ ಸನಾತನ ಹಿಂದೂ ಧರ್ಮ ! ದೇಹದ ಮರ್ತ್ಯತೆ, ಆತ್ಮದ ಅಮರತ್ವ, ಪುನರ್ಜನ್ಮ, ಪುನರವತಾರ ತತ್ವ ಅಥವಾ ಭಗವದವತಾರ ತತ್ವ, ದೇವ–ದೇವತೆಗಳು ಮತ್ತು ದಿವ್ಯಪುರುಷರು, ಅವರ ಆಯಾ ಸ್ಥಾನಗಳು, ಲೋಕಗಳು, ವೈಕುಂಠ ಅಥವಾ ದಿವ್ಯಲೋಕ, ಮತ್ತು ಮನುಷ್ಯನ ಬಹುತೇಕ ಎಲ್ಲಾ ಪ್ರಶ್ನೆಗಳಿಗೂ, ಈ ಗ್ರಂಥದಲ್ಲಿ ಉತ್ತರವಿದೆ ! ೭೦೦ ಸ್ಪಷ್ಟವಾದ ಸಂಸ್ಕೃತ ಶ್ಲೋಕಗಳಲ್ಲಿ, ಪರಮಾತ್ಮನಾದ ಶ್ರೀ ಕೃಷ್ಣನು ತನ್ನ ಶಿಷ್ಯನಾದ ಅರ್ಜುನನೊಡನೆ ಒಂದು ದಿವ್ಯ ಸಂವಾದರೂಪಿಯಾಗಿ ಈ ಯೋಗ ಶಾಸ್ತ್ರವನ್ನು ಗೀತರೂಪವಾಗಿ ಬೋಧಿಸಿದ್ದಾನೆ.

ಭಗವದ್ದಯೆಯಿಂದ ಮತ್ತು ಪೂರ್ವ ಹಾಗೂ ಪಾಶ್ಚಾತ್ಯ ಭಕ್ತರ ಉದಾರ ಧನಸಹಾಯದಿಂದ ನಾವು ಬೆಂಗಳೂರಿನ ನಮ್ಮ ವಿಶ್ವಶಾಂತಿ ಆಶ್ರಮದಲ್ಲಿ ಒಂದು ಸ್ಮರಣೀಯವಾದ ದೇವಾಲಯವನ್ನು 'ಭಗವದ್ಗೀತಾ ದರ್ಶನ ಮಂದಿರ' ಎಂಬ ಹೆಸರಿನಿಂದ ಭಗವದ್ಗೀತೆಯ ಶ್ರೀ ಕೃಷ್ಣನ ರಥದ ಆಕಾರದಲ್ಲಿ ಬೃಹತ್ತಾಗಿ ನಿರ್ಮಿಸಲು ಸಾಧ್ಯವಾಯಿತು. ಭಗವದ್ಗೀತೆಯ ಎಲ್ಲಾ ಶ್ಲೋಕಗಳು ಮತ್ತು ಒಂಬತ್ತು 'ಧ್ಯಾನಶ್ಲೋಕಗಳು' ಎಂದು ಕರೆಸಲ್ಪಡುವ ಶ್ಲೋಕಗಳನ್ನೂ ಸಂಸ್ಕೃತದಲ್ಲಿ ಇಂಗ್ಲಿಷ್, ಹಿಂದಿ, ಮತ್ತು ಕನ್ನಡ ಭಾಷೆಗಳ ಅನುವಾದಗಳೊಂದಿಗೆ ಕೆತ್ತಿ, ಭಗವದ್ಗೀತಾ ರಥದ ರೂಪವಾಗಿ ನಿರ್ಮಿಸಲಾಗಿರುವ ಈ ಮಂದಿರದ ದೊಡ್ಡ ಅಂಗಣದ ಗೋಡೆಗಳಲ್ಲಿಅಲಂಕರಿಸಲ್ಪಟ್ಟು, ಶ್ರೀ ಕೃಷ್ಣ ಮತ್ತು ಅರ್ಜುನರ ಅಮೃತಶಿಲಾ ವಿಗ್ರಹಗಳನ್ನು ಮಧ್ಯೆ ಪ್ರತಿಷ್ಠಿಸಲಾಗಿದೆ !

ಧರ್ಮಸಂಕಟಕ್ಕೆ ಸಿಲುಕಿದ ಪಾರ್ಥನಿಗೆ 'ನಿಮಿತ್ತ ಮಾತ್ರಂ ಭವ ಸವ್ಯಸಾಚಿನ್' ಎಂಬುದನ್ನು ಸಾರಲೋಸುಗ ಹೊರಹೊಮ್ಮಿತು ಭಗವಂತನ ಹೃದಯವಾದ ಈ ಗೀತೆ. ಅಂತರಾರ್ಥವೇನೆಂದರೆ, ನಮ್ಮ ಆತ್ಮವೇ ಅರ್ಜುನನಂತೆ ಜೀವನದ ಯುದ್ಧರಂಗದಲ್ಲಿ ಭ್ರಾಂತಿಯಿಂದ ದಿಕ್ಕು ತೋಚದಾಗಿದೆ. ಜೀವಾತ್ಮನು ಸನ್ಮಾರ್ಗದರ್ಶನಕ್ಕಾಗಿ ಪರಮಾತ್ಮನತ್ತ ತಿರುಗುತ್ತಾನೆ. ಬೋಧೆ ಏನೆಂದರೆ, 'ಪ್ರತಿಯೊಂದೂ ಭಗವಂತನಿಂದಲೇ ನಡೆಯುವುದು. ನಾವು ನಿಮಿತ್ತಮಾತ್ರ'. ಯಾವಾಗ ನಾವು ಇದನ್ನು ಅರ್ಥವಿಸುತ್ತೇವೆಯೋ, ಆಗ ನಾವು ಎಲ್ಲಾ ಕಾರ್ಯಗಳನ್ನೂ ಯಜ್ಞಭಾವದಿಂದ ಅಥವಾ ಸ್ವಾರ್ಥತ್ಯಾಗಭಾವದಿಂದ ಮಾಡುತ್ತೇವೆ. ತ್ಯಾಗಭಾವದಿಂದ ಮಾಡಲ್ಪಟ್ಟ ಯಾವ ಕರ್ಮಗಳೂ ನಮ್ಮ ಆತ್ಮವನ್ನು ಬಂಧಿಸಲಾರವು. ಅಂತಹ ಸ್ವಾರ್ಥರಹಿತ ಕರ್ಮವೇ 'ಕರ್ಮಯೋಗ'ವಾಗಿ ಪರಿಣಮಿಸುತ್ತದೆ. ಆಗ ಆತ್ಮವು ಕರ್ಮದ ಬಂಧನದಿಂದ ಮುಕ್ತವಾಗಿ, ಮುಕ್ತಿ ಅಥವಾ ಪೂರ್ಣಸ್ವಾತಂತ್ರ್ಯವನ್ನು ಪಡೆಯುವುದು. ಹೀಗೆ, ಪ್ರತಿಯೊಂದು ಚಿಂತನೆ, ವಾಕ್ಕು, ಮತ್ತು ಕಾರ್ಯಗಳನ್ನು ಭಗವಂತನಿಗೆ ಅರ್ಪಿಸಿ, ಆತ್ಮನು ಪರಿಪೂರ್ಣನಾದ ಪರಮಾತ್ಮನ ಶಾಂತಿಯನ್ನು ಪಡೆದು, ಪರಿಪೂರ್ಣ ಸ್ವಾತಂತ್ರ್ಯ ಅಥವಾ ಮುಕ್ತಿಯನ್ನು ಅನುಭವಿಸುತ್ತಾನೆ. ಆಗ ಅದಕ್ಕೆ ಜನನ ಮರಣಗಳ ಜಂಜಾಟವಿಲ್ಲ. ಗೀತೆಯ ಮಹಾವಾಕ್ಯ ೧೮ನೇ ಅಧ್ಯಾಯದ ೬೬ನೆಯ ಶ್ಲೋಕದಲ್ಲಿ ಹೇಳಲಾಗಿದೆ.

ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಮ್ ಶರಣಂ ವ್ರಜ ।
ಅಹಂ ತ್ವಾ ಸರ್ವಪಾಪೇಭ್ಯೋ ಮೋಕ್ಷ್ಯಯಿಷ್ಯಾಮಿ ಮಾ ಶುಚಃ ॥ (ಭ. ೧೮: ೬೬)

"ಅರ್ಜುನಾ ! ಎಲ್ಲಾ ಪಾಂಡಿತ್ಯಪೂರ್ಣ ಮತಾಭಿಪ್ರಾಯಗಳನ್ನೂ ಬದಿಗಿಟ್ಟು, ನನ್ನಲ್ಲೇ ಶರಣಾಗಿ, ಆಶ್ರಯ ಪಡೆ. ನಾನು ನಿನ್ನನ್ನು ಎಲ್ಲಾ ಪಾಪಗಳಿಂದಲೂ ಮುಕ್ತಿಗೊಳಿಸಿ, ಅಖಂಡ ಶಾಂತಿ ನೀಡುವೆ. ನೀನು ಚಿಂತಿಸಬೇಡ !" ಎಂದು ಶ್ರೀ ಕೃಷ್ಣನು ನುಡಿದಿದ್ದಾನೆ. ಗೀತೆಯು ಮಮತೆ, ಭಾವುಕ ವ್ಯಾಮೋಹಗಳನ್ನು ನೀಗಿ, ಎಲ್ಲರಿಗೂ ನಮ್ಮ ಅಮರತ್ವದ ಸಾಕ್ಷಾತ್ಕಾರವನ್ನು ಅನುಗ್ರಹಿಸುತ್ತದೆ.

"ಎಲ್ಲಿ ಯೋಗೇಶ್ವರ ಶ್ರೀ ಕೃಷ್ಣನು ಇರುವನೋ, ಎಲ್ಲಿ ಗಾಂಢೀವಧಾರಿಯಾದ ಪಾರ್ಥನಿರುವನೋ ಅಲ್ಲಿ ಅಭಿವೃದ್ಧಿ, ಜಯ, ಕೀರ್ತಿ ಮತ್ತು ಧರ್ಮ ನೆಲೆಸಿರುತ್ತದೆ". ಶ್ಲೋಕ, ತಾತ್ಪರ್ಯಗಳೊಂದಿಗೆ ಗೀತೆಯ ಪ್ರತಿ ಶ್ಲೋಕವನ್ನು ಕೀರ್ತನರೂಪವಾಗಿ ಹಾಡಿದಲ್ಲಿ ಶ್ರೋತೃವೃಂದಕ್ಕೆ ಹೆಚ್ಚಿನ ಪ್ರಯೋಜನ ಆಗಬಹುದೆಂಬ ದೃಷ್ಟಿಯಿಂದ ಈ ಪ್ರಯತ್ನ ಗೈದುದಾಗಿದೆ. ಅಲ್ಲದೆ, ಯಾರೇ ಕೀರ್ತನಕಾರರನ್ನು, ಹರಿದಾಸರನ್ನು ವಿವಿಧ ಆಧ್ಯಾತ್ಮಿಕ ಸಂಸ್ಥೆಗಳು ಅಕ್ಕರೆಯಿಂದ 'ನಮಗೆ ಭಗವದ್ಗೀತೆಯನ್ನು ಹರಿಕಥಾ ರೂಪಿಯಾಗಿ ಒಂದು ಸಪ್ತಾಹದಲ್ಲೋ ಅಥವಾ ಕೆಲವು ಮಾಸ ಪರ್ಯಂತರವೋ 'ಭಗವದ್ಗೀತಾ ಜ್ಞಾನಯಜ್ಞ' ವಾಗಿ ನಡೆಸಿ ಕೊಡಿ' ಎಂದು ಪ್ರಾರ್ಥಿಸಿದಲ್ಲಿ, ಕೀರ್ತನಕಾರರು ಶ್ಲೋಕಗಳ ಅಂತರಾರ್ಥಗಳನ್ನು ದಿವ್ಯ ಕೀರ್ತನಗಳ ಮೂಲಕ ವಿವರಿಸಲು ಈ ಗ್ರಂಥವು ಅನುಕೂಲವಾಗುತ್ತವೆ. ಕೆಲವೆಡೆ ಶ್ಲೋಕಕ್ಕೆ ಒಂದು ಕೀರ್ತನೆಯೂ, ಕೆಲವೆಡೆ ಅನೇಕ ಶ್ಲೋಕಗಳ ಸರಣಿಗೆ ಒಂದು ಕೀರ್ತನೆಯನ್ನೂ ರಚಿಸಲಾಗಿದೆ. ಗೀತೆಯ ಒಟ್ಟು ಏಳು ನೂರು

ಶ್ಲೋಕಗಳಿಗೆ ಸುಮಾರು ಮುನ್ನೂರು ಕೀರ್ತನೆಗಳು ರಚಿಸಲ್ಪಟ್ಟಿದ್ದು, ಕೆಲವು ಪೂರ್ತಿ ಅಧ್ಯಾಯದ ಸಾರರೂಪಿಯಾಗಿ ರಚಿತವಾಗಿವೆ. ನಾವು ಬೆಂಗಳೂರು ಮತ್ತು ಕರ್ನಾಟಕದಾದ್ಯಂತ ಗೀತೆಯ ಬಗ್ಗೆ ಕೀರ್ತನೆ-ಪ್ರವಚನಗಳನ್ನು ನಡೆಸಿದಾಗ ರಚಿಸಿದ ಕೀರ್ತನೆಗಳ ಸಂಗ್ರಹ ಇದು. ಎಲ್ಲರೂ ಈ ಗ್ರಂಥವನ್ನು ನಿತ್ಯ ಪಾರಾಯಣ ಗೈದು, ಭಗವದನುಗ್ರಹಕ್ಕೆ ಪಾತ್ರರಾಗಬೇಕಾಗಿ ವಿನಂತಿ.

ಇಂತೀ, ಶ್ರೀ ಕೃಷ್ಣಪದಾನುರಾಗಿ, ಸಂತ ಭದ್ರಗಿರಿ ಕೇಶವದಾಸ್

******************

## ಮುನ್ನುಡಿ

ಸಂತ ಶ್ರೀ ಭದ್ರಗಿರಿ ಕೇಶವದಾಸರು ರಚಿಸಿದ ಭಗವದ್ಗೀತೆಯನ್ನು ಕುರಿತ ಕೀರ್ತನೆಗಳನ್ನು ಮೂಲ – ತಾತ್ಪರ್ಯದೊಡನೆ ಮತ್ತು ಇತರ ಉಪಯುಕ್ತ ಮಾಹಿತಿಗಳನ್ನು ಒಡಗೊಂಡ ಕರಡು ಪ್ರತಿಯನ್ನು ಸನ್ಮಿತ್ರರಾದ ಬಿ.ಕೆ. ನಾಗೇಂದ್ರ ಅವರು ತಂದುಕೊಟ್ಟು 'ಇದಕ್ಕೊಂದು ಮುನ್ನುಡಿ ಬರೆದು ಕೊಡಿ' ಎಂದರು. ಕರಡಚ್ಚಿನ ಪ್ರತಿಯನ್ನು ಕಂಡಾಗ ಬೆರಗಾದೆ! ಏಕೆಂದರೆ, ಸಂತ ಶ್ರೀ ಭದ್ರಗಿರಿ ಕೇಶವದಾಸರು ಗೀತೆಯ ಮೇಲೆ ಇಷ್ಟು ಸೊಗಸಾದ ಕೀರ್ತನೆಗಳನ್ನು ರಚಿಸಿದ್ದಾರೆ ಎಂಬುದು ತಿಳಿದಿರಲಿಲ್ಲ. ಕನ್ನಡದಲ್ಲಿ ಭಗವದ್ಗೀತೆಯನ್ನು ಕುರಿತು ಕೀರ್ತನೆಗಳನ್ನು ರಚಿಸಿದವರು ಹಲವರಿದ್ದಾರೆ. ದಾಸಸಾಹಿತ್ಯದ ಪರಮಶ್ರೇಷ್ಠರಲ್ಲಿ ಒಬ್ಬರಾದ ಶ್ರೀ ವ್ಯಾಸರಾಯರು 'ಗೀತಾಸಾರ' ಎಂಬ ಕೀರ್ತನೆಯ ಗೀತೆಯನ್ನು ಸಂಕ್ಷಿಪ್ತವಾಗಿ ಚಿತ್ರಿಸಿದ್ದಾರೆ. ಅಲ್ಲಿಂದೀಚೆಗೆ, ಶ್ರೀ ಅನಕೃ ಅವರ ತಾತನವರಾದ ಕೃಷ್ಣಪ್ಪಯೋಗಿಗಳು (೧೯೦೧) ರಚಿಸಿದ 'ಶ್ರೀ ಭಗವದ್ಗೀತಾರ್ಥಸಾರ', 'ಗೀತಾ ಮಕರಂದ ಕೀರ್ತನೆಗಳು' (೧೯೦೬), ಶ್ರೀ ಕ.ಲ. ಲಕ್ಷ್ಮೀನಾರಾಯಣಶಾಸ್ತ್ರಿ ಮುಂತಾದವರು ಕೀರ್ತನೆಗಳಲ್ಲಿ ಗೀತೆಯನ್ನು ಕುರಿತು ಬರೆದಿದ್ದಾರೆ. ಆದರೆ, ಭದ್ರಗಿರಿ ಕೇಶವದಾಸರ ಹಾಗೆ ಗೀತೆಯನ್ನು ಕುರಿತು ವಿವಿಧ ರಾಗ-ತಾಳಗಳಲ್ಲಿ ಮುನ್ನೂರಕ್ಕೂ ಹೆಚ್ಚು ಕೀರ್ತನೆಗಳನ್ನು ರಚಿಸಿದವರು ಕನ್ನಡದಲ್ಲಿ ಇನ್ನೊಬ್ಬರಿಲ್ಲ ! (ಅಪ್ರಕಟಿತ ತಾಳೇಗರಿ ಗ್ರಂಥಗಳಲ್ಲಿ ಕೀರ್ತನೆಗಳನ್ನು ರಚಿಸಿದವರು ಯಾರಾದರೂ ಇರಬಹುದಷ್ಟೆ). ಪದ್ಯರೂಪದಲ್ಲಿ, ಷಟ್ಪದಿ, ಸಾಂಗತ್ಯ, ಶ್ಲೋಕ, ಕಂದ, ವೃತ್ತಿ, ಲಾವಣಿ, ಆಧುನಿಕ ಛಂದಸ್ಸು ಮೊದಲಾದ ವಿವಿಧ ದಿವ್ಯ ಪ್ರಕಾರಗಳಲ್ಲಿ ಗೀತೆಯನ್ನು ಕನ್ನಡಕ್ಕೆ ತಂದವರು ಐಂಕ್ಕೂ ಹೆಚ್ಚು ಮಂದಿ ಕವಿಗಳಿದ್ದಾರೆ.

ಕನ್ನಡದಲ್ಲಿ ಗೀತೆಯನ್ನು ಪದ್ಯಾನುವಾದ ಮಾಡಿದವರು ವಿದೇಶಗಳಲ್ಲೂ ಇದ್ದಾರೆ. ಉದಾಹರಣೆಗೆ, ಅಮೇರಿಕೆಯಲ್ಲಿರುವ ಶ್ರೀ ವಿಶ್ವೇಶ ದೀಕ್ಷಿತ್, ಹ. ಕಂ. ರಾಮಪ್ರಿಯರು, ಮತ್ತೊಬ್ಬರು ವಾಷಿಂಗ್ಟನ್‌ನಲ್ಲಿರುವ ಮೈಸೂರಿನ ಪ್ರೊ. ದೇಶಿಕಾಚಾರ್ – ಹೀಗೆ ಮೂರು ಮಂದಿ ಗೀತೆಯನ್ನು ಪದ್ಯರೂಪದಲ್ಲಿ ಬರೆದಿದ್ದಾರೆ.

ಕನ್ನಡದ ಸಾಹಿತಿಗಳಲ್ಲಿ ಹಲವರು 'ಗೀತಾಸಾಹಿತಿ' ಗಳೆಂದೇ ಪ್ರಸಿದ್ಧರಾದ ವಿದ್ವಾಂಸರು ಇದ್ದಾರೆ. ಆಲೂರು ವೆಂಕಟರಾಯರು, ದೇವುಡು ನರಸಿಂಹಶಾಸ್ತ್ರಿಗಳು, ಹೊಸಕೆರೆ ಚಿದಂಬರಯ್ಯನವರು – ಉಳಿದ ಅನೇಕರಂತೆ ಕೇವಲ ಗೀತೆಗೆ ಸಂಬಂಧಿಸಿದ ಗ್ರಂಥಗಳನ್ನು ರಚಿಸುವುದಷ್ಟೇ ಅಲ್ಲ; ಪ್ರವಚನ, ಪತ್ರಿಕೆ, ಪುಸ್ತಕ ಪ್ರಕಟಣೆ, ಸಂವಾದ ಕಾರ್ಯಕ್ರಮ, ಚರ್ಚೆ, ಗೋಷ್ಠಿ, ಪಾರಾಯಣ ಇತ್ಯಾದಿಗಳನ್ನೂ ಅನುಷ್ಠಾನದಲ್ಲಿಟ್ಟುಕೊಂಡು, ಜೀವಮಾನಪೂರ್ತಿ ಗೀತಾಪ್ರಚಾರಕ್ಕಾಗಿ ಶ್ರಮಿಸಿದವರಾಗಿದ್ದಾರೆ. ಈ ಸಾಲಿಗೆ ಸೇರಿದವರು ಸಂತ ಭದ್ರಗಿರಿ ಕೇಶವದಾಸರು.

ಕೇವಲ ಕನ್ನಡನಾಡಿನಲ್ಲಷ್ಟೇ ಅಲ್ಲದೆ, ಭಾರತದಲ್ಲೂ, ವಿದೇಶಗಳಲ್ಲೂ ಕನ್ನಡ-ಇಂಗ್ಲಿಷ್‌ಗಳಲ್ಲಿ ನೂರಾರು ಗೀತಾ ಕಾರ್ಯಕ್ರಮಗಳನ್ನು ಹರಿಕಥಾ, ಭಾಷಣ, ಸಂವಾದಗಳನ್ನು ನಡೆಸಿದ ಹೆಗ್ಗಳಿಕೆ ಕೇಶವದಾಸರದಾಗಿದೆ. ಈ ದೃಷ್ಟಿಯಲ್ಲಿ ಕನ್ನಡಿಗ ಗೀತಾ ರಾಯಭಾರಿ ಅವರಾಗಿದ್ದಾರೆ.

ಅವರು ಬೇರೆಬೇರೆ ಸಂದರ್ಭಗಳಲ್ಲಿ ಗೀತೆಯನ್ನು ಕುರಿತು ರಚಿಸಿದ ಕೀರ್ತನೆಗಳನ್ನೆಲ್ಲಾ ಒಂದೆಡೆ ಕಲೆಹಾಕಿ, ಸಂಕಲಿಸಿ, ಅಚ್ಚುಕಟ್ಟಾಗಿ ಸಂಪಾದಿಸಿ ಕನ್ನಡಿಗರಿಗೆ ನೀಡಿದ ನಾಗೇಂದ್ರ ಅವರು ದೊಡ್ಡ ಸಾಹಸವನ್ನೇ ಮಾಡಿದ್ದಾರೆ. ಇದರಿಂದ ಕನ್ನಡ ಗೀತಾ ಸಾಹಿತ್ಯಕ್ಕೆ ಸಂತ ಭದ್ರಗಿರಿ ಕೇಶವದಾಸರ ಕೊಡುಗೆಯೇನು ? ಎಂಬುದನ್ನು ತಿಳಿಯುವಂತಾಗಿದೆ. ಇದಕ್ಕಾಗಿ ಕೇಶವದಾಸರ ಭಕ್ತರಷ್ಟೇ ಅಲ್ಲ; ಸಮಸ್ತ ಕನ್ನಡಿಗರೂ ಕೃತಜ್ಞರಾಗಿರಬೇಕು. ಈ ಕಾರ್ಯದಲ್ಲಿ ಅನೇಕ ವಿಧದಿಂದ ಅವರಿಗೆ ನೆರವಾದ ವಿಶ್ವಶಾಂತಿ ಆಶ್ರಮದ ಸಹೋದರಿ ಶ್ರೀಮತಿ ಜಾನಕಿ ಸತ್ಯಮೂರ್ತಿಯವರನ್ನೂ, ಇತರ ಮಿತ್ರರನ್ನೂ ನೆನೆಯುವುದು ಕರ್ತವ್ಯ.

ಬಿ.ಕೆ. ನಾಗೇಂದ್ರ ಅವರು ಆತ್ಮೀಯವಾಗಿ ಪರಿಚಯ ಆದುದು ಬಾಲ್ಟಿಮೋರ್‌ನಲ್ಲಿ ನಡೆದ ಅಕ್ಕ ಸಮ್ಮೇಳನದ ಸಂದರ್ಭದಲ್ಲಿ. ಆ ಮುಂಚೆ ಅಮೇರಿಕಾದಲ್ಲಿ ಸದ್ದಿಲ್ಲದೆ ಅಚ್ಚಕನ್ನಡ ಸಾಹಿತ್ಯೋಪಾಸನಾ ಕಾರ್ಯಕ್ರಮಗಳನ್ನು ಒಂಟಿಯಗಿ ನಿಂತು, ಹಲವಾರು ಆತ್ಮೀಯರ ಸಹಕಾರದೊಡನೆ ಸಾಹಿತ್ಯಸೇವೆ ಮಾಡುತ್ತಿದ್ದ ಶ್ರೀ ಮನೋಹರ್ ಕುಲಕರ್ಣಿ ಮತ್ತು ಡಾ. ವಿಜಯ ಕುಲಕರ್ಣಿ ಅವರ 'ಭೂಮಿಕಾ' ಕಾರ್ಯಕ್ರಮಗಳಲ್ಲಿ ನಾಗೇಂದ್ರ ದಂಪತಿಗಳು ಪರಿಚಯವಾದರು. ನಮಗೆ ಮೊದಲು ಅವರಲ್ಲಿ ಕಂಡು ಬಂದ ಗುಣವೆಂದರೆ ವಿನಯಪೂರಿತ ಮಾತು, ಸೌಜನ್ಯಯುತ ನಡವಳಿಕೆ, ಯಾವುದೇ ಸಂದರ್ಭದಲ್ಲಿ ಮುನಿಸಿಕೊಳ್ಳದ ಪ್ರವೃತ್ತಿ. ಇವೆಲ್ಲದಕ್ಕಿಂತ ಹೆಚ್ಚಾಗಿ ಅಪ್ಪಟ' ಸೇವಾ ಮನೋಭಾವ. ಡಿ.ವಿ.ಜಿ. ಅವರು 'ವನಸುಮ' ಕವನದಲ್ಲಿ ಹೇಳಿರುವ ಮಾತಿದೆ. _______________.

ಪ್ರೊ. ಜಿ. ಅಶ್ವತ್ಥನಾರಾಯಣ

*************

## ಸಂತ ಶ್ರೀ ಭದ್ರಗಿರಿ ಕೇಶವದಾಸರ ಸಂಕ್ಷಿಪ್ತ ಪರಿಚಯ

ಕರ್ನಾಟಕ ಕೀರ್ತನಕಲೆಗೆ ಅರ್ಧ ಶತಮಾನಕಾಲ ಅವಿರಳವಾಗಿ ಶ್ರಮಿಸಿ, ಭಾರತ ಹಾಗೂ ಪಾಶ್ಚಮಾತ್ಯದೇಶಗಳಲ್ಲಿ ಖ್ಯಾತರಾಗಿದ್ದ ಶ್ರೀ ಭದ್ರಗಿರಿ ಕೇಶವದಾಸರು ೧೯೩೪ ರಲ್ಲಿ ಪ್ರಕೃತಿಯ ಸುಂದರ ಬೀಡೆನಿಸಿಕೊಂಡಿರುವ ಉಡುಪಿಗೆ ಮೂರು ಮೈಲಿಯಲ್ಲಿರುವ, ಸುವರ್ಣ ಮತ್ತು ಎಣ್ಣೆಹೊಳೆಸಂಗಮದಲ್ಲಿರುವ ದಿವ್ಯ ಭದ್ರಗಿರಿಯಲ್ಲಿ, ಪುರಾತನವಾದ ಒಂದು ಶ್ರೀ ವೀರವಿಠಲ ಮಂದಿರದ ಸಮೀಪದಲ್ಲಿ ಶ್ರೀ ವೆಂಕಟರಮಣ ಪೈ ಮತ್ತು ಶ್ರೀಮತಿ ರುಕ್ಮಿಣಿಬಾಯಿ ಎಂಬ ಭಕ್ತದಂಪತಿಗಳ ಉದರದಲ್ಲಿ ಜನಿಸಿದರು. ಎಂಟನೆಯ ವಯದಲ್ಲೇ, ನಾಗವೇಣಮ್ಮ ಎಂಬ ಉಪಾಧ್ಯಾಯಿನಿಯ ಉತ್ತೇಜನದಿಂದ ಶಾಲಾ ಪರೀಕ್ಷಕರೆದುರು 'ಚಂದ್ರಸೇನ ರಾಜ' ಎಂಬ ಹರಿಕಥೆ ಮಾಡಿ, ವಿದ್ಯಾರ್ಥಿಗಳ ಮತ್ತು ಊರಿನ ಸಮಸ್ತರ ಹೆಮ್ಮೆಗೆ ಪಾತ್ರರಾಗಿ, ಕ್ರಮೇಣ ದಕ್ಷಿಣಕನ್ನಡ ಜಿಲ್ಲೆಯಲ್ಲೇ, 'ಬಾಲಕ ಹರಿದಾಸ್' ಎಂದು ಖ್ಯಾತಿಯಾದರು. ಎಲ್ಲೆಲ್ಲಿ ಭಜನ ಸಪ್ತಾಹಗಳೋ ಅಲ್ಲೆಲ್ಲಾ ಅವರಿಂದ ಭಾರತೀಯ ಸಂತರಾದ ಭಕ್ತ ಸೂರದಾಸ್, ಕಬೀರ್, ಮೀರಾಬಾಯಿ, ಜ್ಞಾನೇಶ್ವರ್, ನಾಮದೇವ್, ತುಕಾರಾಮ್, ಪುರಂದರ, ಕನಕ, ಹಾಗೂ ದಾನಶೂರ ಕರ್ಣಾದಿ ಪೌರಾಣಿಕ ಕಥೆಗಳಲ್ಲಿ ಮಹಾ ಪಾಂಡಿತ್ಯ ಸಂಪಾದಿಸಿದರು. ಮಣಿಪಾಲದ ಮಹಾತ್ಮಾ ಗಾಂಧಿ ಸ್ಮಾರಕ ಕಾಲೇಜಿನಲ್ಲಿ ಬಿ.ಎ. ಓದುವಾಗ ಒಂದು ದಿನ ತರಗತಿಗೆ ಹೊತ್ತಾಗಿ ಆಗಮಿಸಿದರು. ಅಧ್ಯಾಪಕರು ಏಕೆ ತಡವೆಂದು ಕೇಳಿದಾಗ 'ಹಿಂದಿನ ರಾತ್ರಿ ಹರಿಕಥೆ ಮಾಡಲು ದೂರ ಹೋಗಿದ್ದೆ. ಬರುವಾಗ ಸ್ವಲ್ಪ ತಡವಾಯ್ತು' ಎನ್ನಲು, 'ಹಾಗಿದ್ದರೆ, ಕಾಲೇಜಿನಲ್ಲೂ ಒಂದು ಹರಿಕಥೆ ಮಾಡು' ಎಂದರು. ಎಲ್ಲರೂ ನಕ್ಕರು. 'ತಬಲ, ಹಾರ್ಮೋನಿಯಂ ಸಾಥಿಗಳನ್ನು ಒದಗಿಸಿದರೆ, ಸಂತೋಷದಿಂದ ಮಾಡುವೆ' ಎಂದರು. ಎಲ್ಲಾ ವ್ಯವಸ್ಥೆಯಾಗಿ, ಕಾಲೇಜಿನ ಸ್ಥಾಪಕರಾದ ಶ್ರೀ ಟಿ. ಮಾಧವ ಪೈ ಅವರ ಅಧ್ಯಕ್ಷತೆಯಲ್ಲಿ ಕೇವಲ ೧೫ ವಯಸ್ಸಿನ ಶ್ರೀ ಕೇಶವದಾಸರು ಕೀರ್ತನೆ ಮಾಡಿದಾಗ ಕಾಲೇಜಿನ ಪ್ರಾಧ್ಯಾಪಕ ವರ್ಗ ಹಾಗೂ ವಿಧ್ಯಾರ್ಥಿಗಳ ತಂಡ ಅವರ ಭಾಷಾ ಪಾಂಡಿತ್ಯ, ಸುಮಧುರ ಧ್ವನಿಯ ಕೀರ್ತನೆಗೆ ಬೆಬ್ಬೆರಗಾದರು! ನೆರೆದಿದ್ದ ನೂರಾರು ಗಣ್ಯರು ಅವರನ್ನು ಬಿಗದಪ್ಪಿ, ಹರಸಿ, ಅವರನ್ನು ಅನೇಕ ಕ್ರಮದಲ್ಲಿ ಉತ್ತೇಜಿಸಿದರು. ಅಸಂಖ್ಯಾತ ವಾದ್ಯ ಪಟುಗಳು ಶ್ರೀ ಕೇಶವದಾಸರ ಸಾಹಿತ್ಯ, ಸಂಗೀತ ಪ್ರೌಢಿಮೆಗೆ ಮನಸೋತು, ಅವರೊಡನೆ ಹರಿಕಥೆಯಲ್ಲಿ ಪಕ್ಕವಾದ್ಯ ಸೇವೆ ಮಾಡಿ, ಕೃತಾರ್ಥರಾದರು.

ವಾರಣಾಸಿ ಸಂಸ್ಕೃತ ವಿಶ್ವವಿದ್ಯಾನಿಲಯದಲ್ಲಿ ಅಧ್ಯಾತ್ಮ ತತ್ವಜ್ಞಾನದಲ್ಲಿ ಎಂ.ಎ. ಓದಲು ಅವರಿಗೆ ಅವಕಾಶ ಬಂತು. ಆದರೆ ಅದೇ ಸಮಯಕ್ಕೆ ಅವರ ತಂದೆಯವರಿಗೆ ಅನಾರೋಗ್ಯವಾದ್ದರಿಂದ, ಅವರ ಬಯಕೆಯಂತೆ ಉಡುಪಿಯಲ್ಲೇ ಉಳಿದು, ಅಲ್ಲಿನ ಕಾನೂನು ಕಾಲೇಜಿನಲ್ಲಿ ಎಲ್‌ಎಲ್.ಬಿ. ಮಾಡಿದರು. ಅಷ್ಟು ಆಧುನಿಕ ಪದವಿ ಹೊಂದಿದವರು ಯಾರೂ ಇಲ್ಲಿಯವರೆಗೆ, ಹರಿಕಥಾ ಪ್ರಪಂಚಕ್ಕೆ ಇಳಿದಿರಲಿಲ್ಲ! ಬೆಂಗಳೂರು ಮತ್ತು ಪೂರ್ತಿ ಕರ್ನಾಟಕವೇ ಅವರ ಭಕ್ತಿಯುಕ್ತ ಕೀರ್ತನ ಕಾರ್ಯಕ್ರಮಗಳಿಂದ ರೋಮಾಂಚಗೊಂಡರು! ಕ್ರಮೇಣ, ದಾಸಕೀರ್ತನ ಮಂಡಳಿ ಸ್ಥಾಪಿಸಿ, ಭಗವನ್ನಾಮದ ಮಹಿಮೆ ನಗರದ ಎಲ್ಲಾ ಬಡಾವಣೆಗಳಲ್ಲೂ ಮೊಳಗುವಂತೆ ಯುವಜನಾಂಗಕ್ಕೆ ಸ್ಫೂರ್ತಿ ನೀಡಿ, ದಾಸಾಶ್ರಮ, ಪುರಂದರವಿಠಲ ಮಂದಿರವನ್ನು ಕಟ್ಟಿ, ಭಾರತಾದ್ಯಂತ ಭಕ್ತಗಡಣದೊಡನೆ ತೀರ್ಥಯಾತ್ರೆ ಮಾಡಿ, ಸಹಸ್ರಾರು ಭಕ್ತಿ ಕೀರ್ತನೆಗಳನ್ನು ರಚಿಸಿದ ಕೀರ್ತಿ ಅವರದು. ೧೯೬೪ರಲ್ಲಿ ಅವರು ಏರ್ಪಡಿಸಿದ 'ಕರ್ನಾಟಕ ಕೀರ್ತನಕಾರರ ಸಮ್ಮೇಳನ' ವನ್ನು ಅಂದಿನ ರಾಜ್ಯಪಾಲರಾಗಿದ್ದ ಮಹಾರಾಜ ಜಯಚಾಮರಾಜೇಂದ್ರ ಒಡೆಯರ್ ರವರು ಉದ್ಘಾಟಿಸಿದರು. ಇನ್ನೂರಕ್ಕೂ

ಹೆಚ್ಚು ಕೀರ್ತನಕಾರರು ೫ ದಿನ ಸಂಭ್ರಮದಿಂದ ಹರಿಕೀರ್ತನೆಗಳನ್ನು ನಡೆಸಿಕೊಟ್ಟರು. ತಮಿಳುನಾಡು, ಆಂಧ್ರ, ನವದೆಹಲಿಯಲ್ಲಿ ಖ್ಯಾತರಾದ ಶ್ರೀ ಕೇಶವದಾಸರು ನವದೆಹಲಿಯ ರಾಷ್ಟ್ರಪತಿ ಭವನದಲ್ಲಿ ಅಧ್ಯಕ್ಷ ಡಾ. ರಾಧಾಕೃಷ್ಣನ್‌ರವರೆದುರು ಇಂಗ್ಲಿಷ್‌ನಲ್ಲಿ ೧೯೬೪ ರಲ್ಲಿ ಕೀರ್ತನೆ ನಡೆಸಿದರೆ, ೧೯೬೫ ರಲ್ಲಿ ಡಾ. ರಾಧಾಕೃಷ್ಣನ್‌ರವರೇ ದಾಸಾಶ್ರಮಕ್ಕೆ ಆಗಮಿಸಿ, ಕೀರ್ತನ ಕಿಕ್ಕಿರಿದ ಜನಸ್ತೋಮದೆದುರು ಕೀರ್ತನಕಾಲೇಜಿನ ಅಸ್ತಿಭಾರ ಹಾಕಿದರು. ಆ ಸಂದರ್ಭದಲ್ಲಿ ಶ್ರೀ ಕೇಶವದಾಸರು 'ಶ್ರೀ ಕೃಷ್ಣಸುಧಾಮ' ಎಂಬ ದಿವ್ಯ ಹರಿಕಥೆಯನ್ನು ಇಂಗ್ಲಿಷ್‌ನಲ್ಲಿ ನಡೆಸಿ, ಎಲ್ಲರಿಂದ ಶ್ಲಾಘ್ಯರಾದರು.

ಕಲ್ಕತ್ತಾದಲಿ ನಾಲ್ಕು ತಿಂಗಳು ಕೀರ್ತನೆ ವಿಜಯೋತ್ಸವ ನಡೆಸಿ, ೧೯೬೬ರ ದೀಪಾವಳಿಯಂದು ಪ್ರಥಮ ಪಾಶ್ಚಾತ್ಯ ಯಾತ್ರೆ ಹೊರಟು, ಒಂದು ವರ್ಷ ಪರ್ಯಂತ ವಿಶ್ವಾದ್ಯಂತ ಸಂಚರಿಸಿ, ವೆಟಿಕನ್‌ನಲ್ಲಿ ಪೋಪ್ ಪಾಲ್‌ರನ್ನು ಭೇಟಿ ಮಾಡಿ, ಅಮೇರಿಕಾದ್ಯಂತ ಶಿಷ್ಯಸಮೂಹವನ್ನು ಸಂಪಾದಿಸಿ, ಅವರಿಗೆ ನಮ್ಮ ಧರ್ಮದ ಮರ್ಮವನ್ನೂ, ಗಾಯಿತ್ರಿ ಮಂತ್ರಾದಿ ಉಪದೇಶಗಳನ್ನೂ ಮಾಡಿದರು. ಅಂದಿನಿಂದ ಸತತ ೩೦ ವರ್ಷ ವಿಶ್ವ ಪರ್ಯಟನ ಮಾಡಿ, ಭಾರತದಲ್ಲಿ, ಪಾಶ್ಚಾತ್ಯದಲ್ಲಿ ಅನೇಕ ಕಡೆ ಸತ್ಸಂಗ ಕೇಂದ್ರಗಳನ್ನು ಸ್ಥಾಪಿಸಿ, ಪ್ರತಿ ವರ್ಷ ಅರ್ಧಸಮಯ ಅಮೇರಿಕೆಯಲ್ಲಿ, ಅರ್ಧ ಭಾರತದಲ್ಲಿ ಅವಿಶ್ರಾಂತವಾಗಿ ಗೀತಾ ಭಕ್ತಿ ಯಜ್ಞ, ಸಂತ ಚರಿತಾಮೃತ, ಮಹಾಭಾರತ, ರಾಮಾಯಣ, ಭಾಗವತ ಮುಂತಾದ ಕೀರ್ತನೆ–ಪ್ರವಚನ ನಡೆಸಿ, ಭಗವದ್ಗೀತೆ ಬೈಬಲ್ ನ ಸಾಮ್ಯತೆ ಮೊದಲಾದ ಐವತ್ತಕ್ಕೂ ಹೆಚ್ಚು ಸಾರಭೂತ ಗ್ರಂಥಗಳನ್ನೂ, ಐದು ಸಾವಿರಕ್ಕೂ ಹೆಚ್ಚು ಕನ್ನಡ, ಹಿಂದಿ, ಮರಾಠಿ, ತಮಿಳು, ತುಳು, ಕೊಂಕಣಿಭಾಷೆಗಳಲ್ಲಿ ರಚಿಸಿದರು. 'ರಾಮ ಕೃಷ್ಣ ಹರಿ', 'ಕೋದಂಡರಾಮ ಪಾಹಿ ಕೋದಂಡರಾಮ' ವಿಠಲ ವಿಠಲ ಪಾಂಡುರಂಗ' 'ಸಾಂಬ ಸದಾಶಿವ ಭೋಲಾನಾಥ್' 'Panduranga Pandurnaga God of Kaliyuga', ಮೊದಲಾದ ಅಸಂಖ್ಯಾತ ಭಜನೆಗಳನ್ನು ಜಗದಾದ್ಯಂತ ಭಕ್ತಗಡಣಕ್ಕೆ ಹೇಳಿಕೊಟ್ಟು, ಅವುಗಳು ಬಹಳ ಖ್ಯಾತವಾಗಿ ಅನೇಕ ಭಾಷೆಗಳಲ್ಲಿ ಮುದ್ರಣಗೊಂಡಿವೆ. ಇನ್ನೂರಕ್ಕೂ ಹೆಚ್ಚು ಧ್ವನಿಮುದ್ರಣಗಳ ಹರಿಕಥೆ, ಭಜನೆಗಳನ್ನು ಪ್ರಕಟಿಸಿದ ಅವರ ಕನ್ನಡ ಭಾಷೆ ಜೇನಿನಂತಿದ್ದರೆ, ಅವರ ಇಂಗ್ಲಿಷ್ ಪ್ರವಚನಗಳು ಅಮೃತದಂತಿದ್ದು, ಕೇಳುವ ಭಕ್ತರು ಮೈಮರೆತು, ಭಗವಧ್ಯಾನದಲ್ಲಿ ತನ್ಮಯರಾಗುತ್ತಿದ್ದರು. ೬೩ ವರ್ಷದ ಜೀವನದಲ್ಲಿ ಒಬ್ಬ ವ್ಯಕ್ತಿ ಏನೆಲ್ಲಾ ಸದ್ವಿಷಯಗಳನ್ನು ಸಾಧಿಸಬಹುದು ಎಂಬುದನ್ನು ನಿರ್ಮಮತೆಯಿಂದ ಜಗತ್ತಿಗೆ ತೋರಿ, ಕೊನೆಯ ದಿನದವರೆಗೂ ಹರಿಕಥೆಗಳನ್ನೂ, ಧರ್ಮಪ್ರಚಾರವನ್ನೂ ನಿರರ್ಗಳವಾಗಿ ನಡೆಸಿ, 'ಎನ್ನದೇನಿಲ್ಲ ಹರಿ, ಎಲ್ಲಾ ನಿನ್ನದೋ ರಂಗ' ಎಂಬ ಭಾವದಿಂದ ಸಮಸ್ತ ಕೀರ್ತಿಯನ್ನೂ ಭಗವದರ್ಪಣೆ ಗೈದು, ೧೯೯೭ರಲ್ಲಿ ವಿಶಾಖಪಟ್ಟಣದಲ್ಲಿ ಶ್ರೀ ಪಾಂಡುರಂಗ ಸ್ವಾಮಿಯ ಸನ್ನಿಧಿಯನ್ನು ಸೇರಿದರು.

ವಿಶ್ವದ ಭಕ್ತಿ ಇತಿಹಾಸದಲ್ಲಿ ಶ್ರೀ ಕೇಶವದಾಸರು ಅಜರಾಮರರಾಗಿ, ಸಕಲ ಸಜ್ಜನರಿಂದ ಸ್ತುತ್ಯರಾಗಿದ್ದಾರೆ. ವಿಶ್ವಶಾಂತಿ ಆಶ್ರಮವು ಅವರ ಜೀವನದ ಅನೇಕ ಕಾರ್ಯಕ್ರಮಗಳ ದೃಶ್ಯ ಮಾಧ್ಯಮ (ವಿಡಿಯೋ) ಗಳನ್ನು ಜನತೆಗೆ ದೊರಕುವಂತೆ ಮಾಡುವ ಯೋಜನೆಯನ್ನು ಹೊಂದಿದ್ದು, ಆಶ್ರಮದಲ್ಲಿ ನಿತ್ಯ ಅವರ ಹರಿಕಥೆಗಳ ಧ್ವನಿಮುದ್ರಣಗಳನ್ನು ಪ್ರಸಾರಿಸಿ, ಎಲ್ಲರೂ ಅವುಗಳನ್ನು ಕೇಳಿ ಸತತ ಆನಂದಿಸಲು ಅನುವು ಮಾಡಿದೆ. ಅವರು ಜೀವಿಸಿದ್ದ ಕಾಲದಲ್ಲಿ ಅವರ ಕೀರ್ತನೆಗಳನ್ನು ಕೇಳಿ, ಅವರೊಂದಿಗೆ ಇದ್ದು, ಅವರ ಆಪ್ತಕಾರ್ಯದರ್ಶಿಯಾಗಿ ಅವರ ವಿವಿಧ ಸೇವೆ ಮಾಡುವ ಅವಕಾಶವನ್ನು ಕರುಣಾಮಯನಾದ ಭಗವಂತನು ನನಗೆ ನೀಡಿದುದು ನನ್ನ ಸೌಭಾಗ್ಯವೆಂದು ಭಾವಿಸಿದ್ದೇನೆ.

ಬಿ.ಕೆ. ನಾಗೇಂದ್ರ, ಸಂಪಾದಕ

***********

ಕೇಶವದಾಸರ ಈ ಕೀರ್ತನೆಗಳು ಮುಂದಿನ ನಮ್ಮ ಕನ್ನಡ ಜನಾಂಗಕ್ಕೆ ಭಗವದ್ಗೀತೆಯ ಪ್ರಖ್ಯಾತ ಉಧೃತ ವಾಕ್ಯ (Quotations) ಗಳಾಗುವ ಮಹತ್ವಪೂರ್ಣ ರಚನೆಗಳಾಗಿ ಶೋಭಿಸಿವೆ. ಕೆಲವು ಕೀರ್ತನೆಗಳ ಹೆಸರುಗಳೇ ನಮಗೆ ಅವುಗಳ ಅಂತರಾರ್ಥವನ್ನೂ, ಕೆಲವೆಡೆ ಶ್ಲೋಕ ಸರಣಿಯ ತಾತ್ಪರ್ಯವನ್ನೂ, ಕೆಲವೆಡೆ ಪೂರ್ತಿ ಅಧ್ಯಾಯದ ಸಾರವನ್ನೂ ನೀಡುತ್ತವೆ. ಇದರಿಂದ ಹೆಚ್ಚು ಕೀರ್ತನೆಗಳಿಗೆ ನಾವೇ ಆಯಾ ಶ್ಲೋಕಗಳನ್ನೂ, ಯಾವ ಅಧ್ಯಾಯದ ಸಂದೇಶ ಇದು ಎಂಬುದನ್ನೂ ಗುರುತಿಸಲು ಸಾಧ್ಯವಿದೆ! ಕೆಲವು ಉದಾಹರಣೆಗಳನ್ನು ಇಲ್ಲಿ ನೋಡಿ:

| ಕೀರ್ತನೆಯ ಹೆಸರು | ಕೀರ್ತನೆ ಸಂಖ್ಯೆ | ಶ್ಲೋಕ/ವಿವರ | ಅಧ್ಯಾಯ/ಶ್ಲೋಕ |
|---|---|---|---|
| ಜೀವನು ಪಾರ್ಥ ಜೀವನ ಸಂಗ್ರಾಮದಿ | ೧೧ | ಭಗವದ್ಗೀತಾ ಸಾರ; ವಿಹಂಗಮ ನೋಟ | – |
| ಇಲ್ಲದ ವಸ್ತುವಿಗೆ ಇರುವಿಕೆ ಇಲ್ಲ | ೧೬ | ನಾಸತೋ ವಿದ್ಯತೇ ಭಾವೋ | ೨ : ೧೬ |
| ಅಳಿವುದು ಕಾಯ ಉಳಿವುದು ಕೀರ್ತಿ | ೪೧ | ಅಕೀರ್ತಿಂ ಚಾಪಿ ಭೂತಾನಿ | ೨ : ೩೪ |
| ಭಾವಭಕ್ತಿ ಇಲ್ಲದಗೆ ಶಾಂತಿ ಎಲ್ಲಿಂದ | ೭೭ | ನಾಸ್ತಿ ಬುದ್ಧಿರಯುಕ್ತಸ್ಯ | ೨ : ೬೬ |
| ಯಜ್ಞರಹಿತ ಬಾಳು | ೧೦೫ | ಏವಂ ಪ್ರವರ್ತಿತಂ ಚಕ್ರಂ | ೩ : ೧೬ |
| ತೃಪ್ತಿ ಸಿಗದು ಎಂದೆಂದೂ ವಿಷಯದಿಂ | ೧೧೫ | ಆವೃತಂ ಜ್ಞಾನಮೇತೇನ | ೩ : ೩೯–೪೦ |
| ಅವತರಿಸಿ ಬರುವೆ | ೧೧೬ | ಯದಾ ಯದಾಹಿ ಧರ್ಮಸ್ಯ | ೪: ೭–೮ |
| ಶ್ರದ್ಧಾವಂತನಿಗೆ ಲಭಿಪುದು ಜ್ಞಾನ | ೧೨೧ | ಶ್ರದ್ಧಾವಾಂಲ್ಲಭತೇ ಜ್ಞಾನಂ | ೪ : ೩೯ |
| ಫಲಾಶ್ರಯರಹಿತ ಕರ್ಮವೇ ಯೋಗ | ೧೨೭ | ಶ್ಲೋಕಸರಣಿಯ ಸಾರ | ೬ : ೧–೧೦ |
| ತನ್ನನು ತಾನೇ ಉದ್ಧರಿಸಿಕೊಳಬೇಕು | ೧೨೮ | ಉದ್ಧರೇದಾತ್ಮನಾತ್ಮಾನಂ | ೬ : ೫–೧೦ |
| ಮನೋನಿಗ್ರಹವೆ ಶಾಂತಿಗೆ ಕಾರಣ | ೧೩೦ | ಪ್ರಶಾಂತ ಮನಸಂ ಹ್ಯೇನಂ | ೬ : ೨೭ |
| ಸಿದ್ಧನಾಗುವುದೆ ಜೀವನದ ಧ್ಯೇಯ | ೧೩೫ | ಮನುಷ್ಯಾಣಾಂ ಸಹಸ್ರೇಷು | ೭ : ೩ |
| ಸೃಷ್ಟಿಲಯಗಳಿಗೆ ಕಾರಣ ನಾನೇ | ೧೩೭ | ಏತದ್ಯೋನೀನಿ ಭೂತಾನಿ | ೭ : ೬ |
| ಮೂಲಬೀಜ ಜಗಕೆಲ್ಲವೂ ನಾನೇ | ೧೪೩ | ಬೀಜಂ ಮಾಂ ಸರ್ವ ಭೂತಾನಾಂ | ೭ : ೧೦ |
| ಜೀವರು ಮೋಹಿತರಾಗ್ವರು ಗುಣದಿಂ | ೧೪೬ | ತ್ರಿಭಿರ್ಗುಣಮಯೈ ರ್ಭಾವೈ ರೇಭಿ: | ೭ : ೧೩ |
| ಎನ್ನನರಿವುದೇ ಜ್ಞಾನ | ೧೩೪ | ಭಾವಾರ್ಥ | ೭ |
| ಅನನ್ಯ ಭಕ್ತಿಗೆ ವಶನಾನರ್ಜುನ | ೧೫೨ | ಅನನ್ಯ ಚೇತಾಃ | ೮ : ೧೪ |
| ಕೀರ್ತನೆಗೈವವರ್ ಪ್ರಿಯರೆನಗೆ | ೧೫೮ | ಸತತಂ ಕೀರ್ತಯಂತೋ ಮಾಂ | ೯ : ೧೪ |
| ಭಕ್ತಿಯಿಂದ ಅರ್ಪಿಸಿದ ಪತ್ರ ಪುಷ್ಪ ಫಲ | ೧೬೫ | ಪತ್ರಂ ಪುಷ್ಪಂ ಫಲಂ ತೋಯಂ | ೯ : ೨೬ |
| ಸರ್ವ ಪ್ರಾಣಿಗಳ ಹೃದಯಸ್ಥ ನಾನೇ | ೧೭೦ | ಅಹಮಾತ್ಮಾ ಗುಡಾಕೇಶ | ೧೦ : ೨೦ |
| ಕರ್ಮ ಸಮಸ್ತವ ಕೃಷ್ಣಾರ್ಪಣ ಗೈದು | ೧೮೬ | ಏತು ಸರ್ವಾಣಿ ಕರ್ಮಾಣಿ | ೧೨ : ೬–೭ |
| ನಂಬು ನೀನೆನ್ನ ತುಂಬು ಹೃದಯದಿಂ | ೧೮೮ | ತೇಷಾಮಹಂ ಸಮುದ್ಧರ್ತಾ | ೧೨ : ೭–೮ |
| ಸತತ ಸಂತುಷ್ಟಚಿತ್ತನು ಯೋಗಿ | ೧೯೮ | ಸಂತುಷ್ಟಃ ಸತತಂ ಯೋಗೀ | ೧೨ : ೧೪ |
| ಧರ್ಮಾಮೃತವಿದು ಈ ಭಕ್ತಿಯೋಗವು | ೨೦೫ | ಯೇ ತು ಧರ್ಮಾಮೃತಮಿದಂ | ೧೨ : ೨೦ |
| ಸತ್ವ ರಜ ತಮಗಳು ಪ್ರಕೃತಿಗುಣಗಳು | ೨೨೦ | ನಾನ್ಯಂ ಗುಣೇಭ್ಯಃ | ೧೪ : ೧೯–೨೦ |
| ಸರ್ವ ಧರ್ಮಗಳ ಸಾರ ಪ್ರಪತ್ತಿ | ೨೨೯ | ಸರ್ವಧರ್ಮಾನ್ ಪರಿತ್ಯಜ್ಯ | ೧೮ : ೬೬ |

ಶ್ರೀ ಕೇಶವದಾಸರು ಸವಿಯಾದ ಸರಳ ಶೈಲಿಯಲ್ಲಿ ಭಗವದ್ಗೀತಾ ಶ್ಲೋಕಗಳಿಗೆ ರಚಿಸಿರುವ ಕನ್ನಡದ ಈ ಕೃತಿಗಳನ್ನು ಓದುತ್ತಿದ್ದರೆ, ಅವರೇ ಸ್ವಯಂ ತಮ್ಮ ನೈಜ ತೇಜೋಮಯ, ಕಾಂತಿಯುಕ್ತ ಹಸನ್ಮುಖದಿಂದ ನಮ್ಮ ಮುಂದೆ ಪ್ರತ್ಯಕ್ಷ ಇದ್ದು, ಭಕ್ತರಿಗೆ ಆಯಾ ತತ್ವಗಳನ್ನು ವಿವರಿಸುತ್ತಿರುವ ದಿವ್ಯಾನುಭವವಾಗುತ್ತದೆ! ಈ ಸಮುಚ್ಚಯವನ್ನು ನೀವೆಲ್ಲರೂ ಆನಂದಿಸಿ, ಭಗವದ್ದರ್ಶನದ ಅನುಭಾವ ಪಡೆದರೆ ಈ ಪ್ರಕಟಣೆಯು ಸಾರ್ಥಕವಾಗುವುದು.

***************

## ವಿಶ್ವಶಾಂತಿ ಆಶ್ರಮ
## ಶ್ರೀ ಕೇಶವದಾಸ್ ಬುಕ್ ಟ್ರಸ್ಟ್‌ನ ಇತರ ಪ್ರಕಟಣೆಗಳು

### ಸಂತ ಶ್ರೀ ಕೇಶವದಾಸರ ಕನ್ನಡ ಗ್ರಂಥಗಳು

೧. ಭಜನ ಭಾಗೀರಥಿ: ಭಾಗ ೧: ... ... ರೂ. ೫೦.೦೦ (ಭಜನ, ಕೀರ್ತನೆಗಳು)
೨. ಭಜನ ಭಾಗೀರಥಿ: ಭಾಗ ೨: ... ... ರೂ. ೫೦.೦೦ (ಭಜನ, ಕೀರ್ತನೆಗಳು)
೩. ಭಜನ ಸುಧಾ ... ... ... ರೂ. ೭೦.೦೦ (ಭಜನ, ಕೀರ್ತನೆಗಳು)
೪. ಕೇಶವ ಕೀರ್ತನಗಂಗಾ ... ... ರೂ. ೭೦.೦೦ (ಭಜನ, ಕೀರ್ತನೆಗಳು)

೫. ಕೇಶವ ನಾಮಾಮೃತ ... ರೂ. ೫೦.೦೦ (ಭಜನ, ಕೀರ್ತನೆಗಳು)
೬. ಕರ್ನಾಟಕ ಕೀರ್ತನ ತರಂಗಿಣಿ ... ... ರೂ. ೧೦೦.೦೦ (ಹರಿಕಥೆಗಳ ಸಂಕಲನ)
೭. ಸದ್ಗುರು ದತ್ತಾತ್ರೇಯ ಗೀತೆಗಳು ... ... ರೂ. ೫೦.೦೦ (ಭಜನ, ಕೀರ್ತನೆಗಳು)
೮. ಸಂತ ಭದ್ರಗಿರಿ ಕೇಶವದಾಸರ ಕೀರ್ತನೆಗಳು: ರೂ. ೭೫.೦೦ (ಭಜನ, ಕೀರ್ತನೆಗಳು)
೯. ಭಜನಪ್ರಿಯ ಕೇಶವ ... ... ... ರೂ. ೫೦.೦೦
೧೦. ಭಗವದ್ಗೀತಾ ದರ್ಶನ ... ರೂ. ೫೦.೦೦ (ಶ್ಲೋಕ; ಇಂಗ್ಲಿಷ್, ಹಿಂದಿ,
ಮತ್ತು ಕನ್ನಡದಲ್ಲಿ ತಾತ್ಪರ್ಯ)
೧೧. ಕಥಾ ಕೀರ್ತನ ತರಂಗಿಣಿ ... ... ರೂ. ೧೦೦.೦೦
೧೨. ಪುರಂದರೋಪನಿಷತ್ ಭಾಗ: ೧ ... ರೂ. ೨೦.೦೦ (ಶ್ರೀ ಪುರಂದರದಾಸರ ಕೀರ್ತನೆಗಳ ಅಂತರಾರ್ಥ)
೧೩. ಸದ್ಗುರು ಉಪದೇಶಾಮೃತ ... ... ರೂ. ೨೦.೦೦ (ಬೋಧೆಗಳು)
೧೪. ಪ್ರೇಮಯೋಗ ... ... ... ರೂ. ೨೦.೦೦ (ಭಕ್ತಿಯೋಗ)
೧೫. ಶ್ರೀ ಪುರಂದರದಾಸರು (ನಾಟಕ)
೧೬. ಶ್ರೀ ಕನಕದಾಸರು (ನಾಟಕ)
೧೭. ಸಂತ ತುಕಾರಾಮ್ ನಾಟಕ

## <u>ಸಂತ ಶ್ರೀ ಕೇಶವದಾಸರ ಇಂಗ್ಲಿಷ್ ಗ್ರಂಥಗಳು</u>

1. Lord Ganesha ... ... Rs. 150.00
2. Sadguru Dattatreya ... ... Rs. 200.00
3. Gayatri The Highest Meditation Rs. 150.00
4. Cosmic Hymns and Prayers ... Rs. 75.00
5. This Is Wisdom ... ... Rs. 150.00
6. Healing Techniques of the Holy East. Rs. 30.00
7. Liberation From Karma and Rebirth Rs. 150.00
8. Sri Satyanarayana Pooja & Katha Rs. 100.00
9. Bhagavadgita Darshan ... ... Rs. 108.00
10. Stories and Parables: ... ... Rs. 50.00
11. Lord Panduranga & Minstrels ... Rs. 30.00
12. Geethacharya & Other Dramas Rs. 25.00
13. Ramayana At A Glance ... Rs. 20.00
14. Prema Yoga ... ... ... Rs. 10.00
15. Mystic Christ ... ... ... Rs. 10.00
16. Thus Sang Lord Krishna (Gita) Rs. 12.00
17. Garland of Prayers ... ... Rs. 50..00
18. Sadguru Speaks ... ... Rs. 150.00
19. Cosmic Shakti Kundalini ... Rs. 150.00
20. Self Realization ... ... Rs. 150.00
21. The Purpose of Life ... ... Rs. 150.00
22. Life & Teachings of Sant Keshavadas Rs. 150.00
23. Essence of Bhagavadgita & Bible Rs. 250.00
24. Minstrel of Love (Michael Mukowsky) Rs. 150.00

*******